ಶ್ರೀ ಎಂ.ಸಿ. ನಾಣಯ್ಯ :- ಬಸ್‌ಗಳು ಕೊರತೆ ಇರುವಂಥ ಭಾಗದಲ್ಲಿ ಬಸ್‌ಗಳನ್ನು ಹಾಕುವುದಕ್ಕಾಗಿ ಹಂತ ಹಂತವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ನಾವು ಕೆ.ಎಸ್.ಆರ್.ಟಿ.ಸಿ.ಯನ್ನು ಸುಧಾರಣೆ ಮಾಡಿದ್ದೇವೆ. ಸುಧಾರಣೆ ಮಾಡಿಲ್ಲವೆಂದು ಹೇಳಿದರೆ ನಾನು ಒಪ್ಪುವುದಿಲ್ಲ

ಶ್ರೀ ವಾಟಾಳ್ ನಾಗರಾಜ್: -ಅದು ಇಲ್ಲಾ ದಿವಾಳಿ ಎದ್ದು ಹೋಗಿದೆ. ಎಲ್ಲಿ ಬಸ್‌ಗಳು ಬರಬೇಕೋ ಅಲ್ಲಿ ಬರುವುದಿಲ್ಲ. ಜನಗಳಿಗೆ ಅನಾನುಕೂಲವಾಗಿದೆ. ಈ ಸಾರಿಗೆ ವ್ಯವಸ್ಥೆ ಸಂಪೂರ್ಣ ನಾಶವಾಗಿ ಹೋಗಿದೆ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಜನತೆ ಬಗ್ಗೆ ಕಾಳಜಿ ಇರಲಿ. ಸರ್ಕಾರವನ್ನು ಸಮರ್ಥನೆ ಮಾಡಬೇಕೆನ್ನುವ ದೃಷ್ಟಿಯಿಂದ ಉತ್ತರ ಕೊಡುವುದು ಬೇಡ.

ಅಧ್ಯಕ್ಷರು:- ನಾನು ತಮಗೆ ಇಷ್ಟೇ ಹೇಳುತ್ತೇನೆ, ನನ್ನ ಊರಿನ ಹೆಸರು ಅಡ್ಡಗಲ್ಲು. ನನ್ನ ಊರಿನಿಂದ ಶ್ರೀನಿವಾಸಪುರ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಹೋಗಬೇಕಾದರೆ ಸುಮಾರು 28 ಕಿಲೋಮೀಟರ್ ಹೋಗಬೇಕು. ಈ 28 ಕಿಲೋಮೀಟರ್ ದೂರ 3 ಬಸ್‌ಗಳನ್ನು ಬದಲಾಯಿಸಿ ಎರಡೂವರೆ ಗಂಟೆ ಕಾಲ ಹೋಗಬೇಕು. ಅಲ್ಲಿಗೆ ಒಂದು ಬಸ್ ಹಾಕಿ ಎಂದು 20 ಸಾರಿ ಹೇಳಿದ್ದರೂ ಇವತ್ತಿನವರೆಗೂ ಬಸ್ ಹಾಕಿಲ್ಲ. ನಾನು ವಿಧಾನ ಸಭೆಯ ಅಧ್ಯಕ್ಷನಾಗಿ 3 ವರ್ಷಗಳಾಗುತ್ತಾ ಬಂತು. ಇದುವರೆಗೂ ಆ ಕೆಲಸ ಆಗಿಲ್ಲ

ಶ್ರೀ ವಾಟಾಳ್ ನಾಗರಾಜ್ :- ಅಧ್ಯಕ್ಷರ ಕ್ಷೇತ್ರದಲ್ಲೇ ಹೀಗಾಗಿದೆ. ನನ್ನ ಕ್ಷೇತ್ರದಲ್ಲಿ 5 ಬಸ್‌ಗಳು ನಿಂತು 6 ತಿಂಗಳಾಯಿತು. ಯಾರ ಮುಂದೆ ನಾವು ಹೇಳುವುದು? ಹೇಳಿದರೂ ಅದು ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗೆ ಆಗಿದೆ. ಸಾಮಾನ್ಯ ಜನರಿಗೆ ಇದರಿಂದ ಏನು ಅನುಕೂಲವಾಗುತ್ತಿಲ್ಲ. ಸಾರಿಗೆ ಸಂಸ್ಥೆ ಸಂಪೂರ್ಣವಾಗಿ ಕೆಟ್ಟು ಕುಲಗೆಟ್ಟು ಹೋಗಿದೆ.

10.40 ಎ.ಎಂ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅದನ್ನು ಸರ್ಕಾರ ಅರಿತುಕೊಂಡಿದೆ. ಈ ಸಂದರ್ಭದಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಾವು ನ್ಯಾಷನಲೈಸ್ ಮಾಡಿರತಕ್ಕಂಥ ರೂಟ್‌ಗಳು ಏನು ಇವೆ ಆ ಎಲ್ಲಾ ಭಾಗದಲ್ಲಿ ಸರಿಯಾಗಿ ಹೋಗುತ್ತಾ ಇಲ್ಲ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಕಳೆದ ಮೂರು ವರ್ಷಗಳಿಂದ ಸರಿಯಾದ ರೀತಿಯಲ್ಲಿ ಇದನ್ನು ನಡಿಸುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಇದರೆ ಬಗ್ಗೆ ಹೊಸ ಚಿಂತನೆಯನ್ನು ಮಾಡುತ್ತೇವೆ.

ನರಸಿಂಹರಾಜ ಕ್ಷೇತ್ರದ ರಾಜೇಂದ್ರನಗರ ಬಸ್ ನಿಲ್ದಾಣ ನಿರ್ಮಾಣ

66(245) ಶ್ರೀ ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ನರಸಿಂಹರಾಜ ಕ್ಷೇತ್ರದ ನಾಯ್ಡು ನಗರ (ರಾಜೇಂದ್ರನಗರ) ಬಸ್ ನಿಲ್ದಾಣ ನಿರ್ಮಿಸಲು ಈಗಾಗಲೇ ಸ್ಥಳೀಯ ಅಧಿಕಾರಿಗಳು ನಿಲ್ದಾಣದ ನಕ್ಷೆ ಹಾಗೂ ಅಂದಾಜು ವೆಚ್ಚದ ಪಟ್ಟಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದುದು ನಿಜವಲ್ಲವೇ?

2) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

3) ಈ ನಿಲ್ದಾಣದ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

1) ನಿಜ.

2) ಈ ಕೆಲಸವು 1997-98ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿರಲಿಲ್ಲ. ಆದುದರಿಂದ ಕೆಲಸವನ್ನು ಕೈಗೊಂಡಿರುವುದಿಲ್ಲ

3) ಈ ಕೆಲಸವನ್ನು 1998-99ರ ಆಯವ್ಯಯದಲ್ಲಿ ಸೇರ್ಪಡೆ ಮಾಡಲು ಉದ್ದೇಶಿಸಲಾಗಿದೆ. ಆಯವ್ಯಯಕ್ಕೆ ಒಪ್ಪಿಗೆ ದೊರೆತ ನಂತರ ಸದರಿ ಯೋಜನೆಗೆ ಮಂಜೂರಾತಿ ನೀಡಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಶ್ರೀ ಇ. ಮಾರುತಿ ರಾವ್ ಪವಾರ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಕ್ಷೆ ಮತ್ತು ಅಂದಾಜುಗಳ ಪಟ್ಟಿಯನ್ನು ಮೈಸೂರು ನಗರದ ಕಛೇರಿಯಿಂದ ಬಂದಿದೆ ಎನ್ನುವಂಥ ವಿಚಾರವನ್ನು ತಿಳಿಸಿದ್ದಾರೆ. ಆದರೆ ಮತ್ತೆ ಇದನ್ನು ಆಯವ್ಯಯದಲ್ಲಿ 1998-99ರಲ್ಲಿ ಸೇರಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದರೆ ಈಗಾಗಲೇ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಕಳೆದ ಎರಡು ತಿಂಗಳ ಹಿಂದೆ (24ನೇ ತಾರೀಖಿನಿಂದ) ಈಗಾಗಲೇ ಇದಕ್ಕೆ ಒಪ್ಪಿಗೆ ದೊರೆತಿದೆ. ಆದರೆ ಇದನ್ನು ಇನ್ನೊಂದು ಸಲ ಆಯವ್ಯಯದಲ್ಲಿ ಸೇರಿಸಿರುತ್ತೇವೆ ಎನ್ನುವುಂಥದ್ದು ಉತ್ತರ ತಪ್ಪು ಬಂದಿದೆ. ದಯಮಾಡಿ ತಕ್ಷಣದಲ್ಲಿ ಆ ಒಂದು ಟೆಂಡರ್ ಕರೆದು ಅಲ್ಲಿ ಬಸ್ ನಿಲ್ದಾಣ ಪ್ರಾರಂಭ ಮಾಡುವುದಕ್ಕೆ ಯಾವಾಗ ಕಾಮಗಾರಿ ಪ್ರಾರಂಭ ಮಾಡುತ್ತೀರಾ ಎನ್ನುವ ಬಗ್ಗೆ ಖಚಿತವಾದ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಸಾರಿಗೆ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, 1998-99ನೇ ಸಾಲಿಗೆ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಆದರೆ ಮುಂದೆ ಇರತಕ್ಕಂಥ ಆಡಳಿತ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಕೊಟ್ಟು ಈ ಕಾಮಗಾರಿಯನ್ನು 1998-99ನೇ ಸಾಲಿಗೆ ಪ್ರಾರಂಭ ಮಾಡುತ್ತೇವೆ.

ಶಿಗ್ಗಾಂವ ಬಸ್ ನಿಲ್ದಾಣ ಕಟ್ಟಡ

68(258) ಶ್ರೀಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಗ್ಗಾಂವ ಬಸ್ ನಿಲ್ದಾಣ ನಿರ್ಮಾಣ ಹಾಗೂ ಸವಣೂರು ಬಸ್ ಡಿಪೋ ಸವಣೂರು ಬಸ್ ಡಿಪೋ ಕಟ್ಟಡಗಳ ಕಾಮಗಾರಿಗಳು ಯಾವ ಹಂತದಲ್ಲಿವೆ?